ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಹತ್ತು ಎಕರೆಗಿಂತ ಕಡಿಮೆ ಜಮೀನು ಇದ್ದರೂ ಕೂಡ, ಜಂಟಿ ಖಾತೆ ಇದ್ದರೆ ವಿನಾಯಿತಿ ಸಿಗುವುದಿಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದನ್ನು ಆಲೋಚನೆ ಮಾಡೋಣ.

ಉಪಾಧ್ಯಕ್ಷರು.—ಹಿರಿಯರೇ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ.

ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಪ್ರಾರಂಭಿಸುವ ಕುರಿತು.

೫೩೮. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನಕ್ಕೆ ಇದೆಯೇ ?

(ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ಇದೆ.

(ಆ) ಸಮಗ್ರ ಬಾಲವಿಕಾಸ ಯೋಜನೆಯನ್ನು ಹಂತ ಹಂತವಾಗಿ ಒನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ವಿಸ್ತರಿಸಲು ಉದ್ದೇಶಿಸಲಾಗಿದೆ. ಕಲಘಟಗಿ ತಾಲ್ಲೂಕಿನಲ್ಲಿ ಸಹಾ ಈ ಯೋಜನೆಯನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ಸಿ.ಸಿದ್ದನಗೌಡರ್ (ಕಲಘಟಗಿ) —ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರವನ್ನು ಈ ಸಲವೇ ಪ್ರಾರಂಭಿಸುತ್ತಾರೆಯೇ ? ಈ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿನಿಲಯಗಳನ್ನು ಕಟ್ಟಿರುವುದಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುತ್ತಾರೆಯೇ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರು ಇಲ್ಲಿ ಸಮಗ್ರ ಬಾಲವಿಕಾಸ ಯೋಜನೆ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆದರೆ ಈಗ ಕೇಳುತ್ತಿರುವ ಪ್ರಶ್ನೆಯೇ ಬೇರೆ. ಅವರೂ ಕೂಡ ಸದಸ್ಯರು ತಿಳಿಸಿರುವ ವಿಚಾರವನ್ನು ಪರಿಶೀಲಿಸಲಾಗುವುದು.

ಅಂತರಜಾತಿ ವಿವಾಹಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

೫೬೯ (೧) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧೯೮೩ ರಿಂದ ಇನ್ನುವರೆಗೂ ಎಷ್ಟು ಅಂತರಜಾತಿ ವಿವಾಹ ದಂಪತಿಗಳಿಗೆ ಪ್ರೋತ್ಸಾಹ ಹಾಗೂ ಹಣ ಸೌಲಭ್ಯ ನೀಡಲಾಗಿದೆ. ಈಗ ನೀಡುತ್ತಿರುವ ಹಣವನ್ನು ಹೆಚ್ಚಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ? ಹಾಗೂ ಹಣ ಕೊಡುವಾಗ ವಿಳಂಬವಾಗುತ್ತಿರಲು ಕಾರಣವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

	ಪ್ರೋತ್ಸಾಹ ಧನ ನೀಡಿದ್ದು ರೂ. ಗಳು	ದಂಪತಿಗಳ ಸಂಖ್ಯೆ
೧೯೮೩–೮೪	೨,೬೧,೦೦೦–೦೦	೫೭
೧೯೮೪–೮೫	೩,೧೪,೦೦೦–೦೦	೬೭
೧೯೮೫–೮೬	೭,೦೫,೦೦೦–೦೦	೧೪೭
೧೯೮೬–೮೭	೧,೯೯,೦೦೦–೦೦	೪೧
ಒಟ್ಟು	೧೪,೭೯,೦೦೦–೦೦	೩೧೨

ಈಗ ನೀಡುತ್ತಿರುವ ಪ್ರೋತ್ಸಾಹ ಧನವನ್ನು ಹೆಚ್ಚಿಸಲು ಉದ್ದೇಶಿಸಿರುವುದಿಲ್ಲ. ಆರ್ಜಿದಾರರರು ಸರಿಯಾದ ಮಾಹಿತಿಗಳನ್ನು ಒದಗಿಸದೇ ಇರುವುದರಿಂದ ಕೆಲವೊಮ್ಮೆ ಹಣ ವಂಚಿತರು ಮಾಡುವುದು ವಿಳಂಬವಾಗಿದೆ.

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಉಪಾಧ್ಯಕ್ಷರೇ, ನಾಲ್ಕು ವರ್ಷಗಳಲ್ಲಿ ಸುಮಾರು ೩೧೨ ಜೊತೆ ಅಂತರ್ ಜಾತಿಯ ವಿವಾಹಗಳು ಆಗಿವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಬರೀ ೩೧೨ ಜೊತೆ ಅಲ್ಲ, ಸಾವಿರಾರು ಅಂತರ್ ಜಾತಿ ವಿವಾಹಗಳು ಆಗಿರುತ್ತದೆ. ಸಮಾಜದಲ್ಲಿರತಕ್ಕಂಥ ಅನಿಷ್ಟ ಜಾತಿ ಪದ್ಧತಿಯನ್ನು ತೊಡೆದುಹಾಕತಕ್ಕ ಯಾವ ಪೀಳಿಗೆ ಮುಂದೆ ಬರತಕ್ಕಂಥ ಸಂದರ್ಭದಲ್ಲಿಯೂ ಕೂಡ ಸರ್ಕಾರದವರು ಪ್ರೋತ್ಸಾಹ ಧನ ಕೊಡುತ್ತಿರುವುದು ೫ ಸಾವಿರ ರೂಪಾಯಿಗಳು ಮಾತ್ರ. ಅದೂ ಎರಡು ಸಾವಿರ ರೂಪಾಯಿ ಸರ್ಟಿಫಿಕೇಟ್ ಕೊಡುತ್ತೀರಿ, ೩ ಸಾವಿರ ರೂಪಾಯಿ ನಗದು ಕೊಡುತ್ತೀರಿ. ಇದನ್ನು ಕೊಡಬೇಕಾದರೂ ೪–೫ ವರ್ಷಗಳ ಕಾಲ ತೆಗೆದುಕೊಳ್ಳುತ್ತೀರಿ. ಅಲ್ಲದೆ ಇನ್ನೊಂದು ಭಾರಿ ಮುಖ್ಯವಾದ ಕಾರಣ ಈ ಅಂತರ್ ಜಾತಿ ವಿವಾಹವಾದ ದಂಪತಿಗಳಿಗೆ ವಾರ್ಷಿಕ ವರಮಾನವನ್ನು ನಿಗದಿ ಮಾಡಿದ್ದೀರಿ. ಸಾಮಾನ್ಯವಾಗಿ ಈ ವಿವಾಹಗಳನ್ನು ಪರಿಶಿಷ್ಟ ಜನಾಂಗದವರು ಮತ್ತು ವರ್ಗದವರು ಮಾಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ನೀವು ಇನ್‌ಕಂ ನಿಗದಿ ಮಾಡಿರುವುದನ್ನು ತೆಗೆಯಬೇಕು. ಈ ವಿಚಾರದಲ್ಲಿ ಹಿಂದೆ ಮಾನ್ಯ ವಿ.ಎಲ್. ಪಾಟೀಲರು ಮಂತ್ರಿಗಳಾಗಿದ್ದಾಗ, ನಮ್ಮ ಮಾನ್ಯ ಸದಸ್ಯ ರೊಬ್ಬರು ಇದೇ ಪ್ರಶ್ನೆ ಕೇಳಿದಾಗ, ಪರಿಶೀಲನೆ ಮಾಡುತ್ತೇನೆಂದು ಒಪ್ಪಿಕೊಂಡಿದ್ದರು. ಆದರೂ ಈವರೆಗೂ ಈ ವಿಚಾರದಲ್ಲಿ ಕನ್‌ಸಿಡರ್ ಮಾಡುವ ವ್ಯವಸ್ಥೆಯನ್ನೇ ಮಾಡಿಲ್ಲ. ಆದ್ದರಿಂದ ಇನ್‌ಕಂ ತೆಗೆಯಬೇಕೆಂಬುದು ಒಂದು ಪ್ರಶ್ನೆ, ಆಮೇಲೆ ತಡ ಮಾಡದೇ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

(ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಅಂತರ್ ಜಾತಿ ವಂದುವೆಯಾಗಲು ವರ ಮಾನವನ್ನು ನಿಗದಿ ಮಾಡಿದ್ದೇವೆ. ವರ್ಷಕ್ಕೆ ೧೨ ಸಾವಿರ ರೂ. ಗಳೊಂದಿಗೆ ವರಮಾನವಿದ್ದವರು ಅಂತರ್ ಜಾತಿ ವಿವಾಹವಾಗಬಹುದು, ಎಂದು ನಿಗದಿ ಮಾಡಿದ್ದೇವೆ. ವರಮಾನದ ಮಿತಿಯನ್ನು ಬಹಳ ಜಾಸ್ತಿ ಮಾಡಿದ್ದೇವೆ. ಈ ರೀತಿ ನಿಗದಿ ಮಾಡಿರುವ ವರಮಾನವನ್ನು ರಿವೈಸ್ ಮಾಡುವುದಕ್ಕೆ ಕಷ್ಟವಾಗಿದೆ. ಅನಂತರ ಕೊಡತಕ್ಕ ೫ ಸಾವಿರ ರೂ. ಗಳನ್ನೂ ಹಣದ ರೂಪದಲ್ಲಿ ಕೊಡುವುದಿಲ್ಲ. ೨ ಸಾವಿರ ನಗದು ಮತ್ತು ೩ ಸಾವಿರ ಉಳಿತಾಯ ಪತ್ರ ರೂಪದಲ್ಲಿ ಕೊಡುತ್ತೇವೆ.

ಶ್ರೀ ಎಂ. ಶಿವಣ್ಣ.—ಸಮಾಜದಲ್ಲಿ ಇರತಕ್ಕ ಜಾತೀಯತೆ ವ್ಯವಸ್ಥೆಯನ್ನು ಹೋಗಲಾಡಿಸಲು ಈಗ ಯಾವ ಪೀಳಿಗೆಯವರೂ ಮುಂದೆ ಬರುತ್ತಿದ್ದಾರೆ. ಇತ್ತೀಚೆಗೆ ಬಹಳ ಜನ ಈ ರೀತಿಯ ಮದುವೆ ಆಗುತ್ತಿದ್ದಾರೆ. ಆದುದರಿಂದ ಈ ರೀತಿ ವಂದುವೆಯಾದ ದಂಪತಿಗಳಿಗೆ ಸರ್ಕಾರದ ಕೆಲಸ ಕೊಡುತ್ತೇವೆಂದು ಘೋಷಣೆ ಮಾಡುವುದಾದರೆ, ಈ ೩೧೨ ಜೊತೆ ಅಲ್ಲ, ಸಾವಿರಾರು ಜೊತೆಗಳು ಮುಂದೆ

ಬರುತ್ತಾರೆ. ಆದ್ದರಿಂದ ತಾವು, ಹುಡುಗನಿಗೆ ಅಥವಾ ಹುಡುಗಿಗೆ ಕೆಲಸ ಕೊಡುವ ಘೋಷಣೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಇದು ಬಹಳ ಕಷ್ಟವಾಗುತ್ತದೆ. ಉದ್ಯೋಗ ಕೊಡುವ ಪ್ರಶ್ನೆ ಈಗ ಇಲ್ಲ. ೫ ಸಾವಿರ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಇದೆ. ಪರಮಾನವನ್ನು ೧೨ ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ಇದು ಕಡಿಮೆ ಅಲ್ಲ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಇದೊಂದು ಕ್ರಾಂತಿಕಾರಕವಾದ ವಿಚಾರ ಆದ್ದರಿಂದ ಅವರಿಗೆ ಉದ್ಯೋಗ ಕೊಡತಕ್ಕಂಥ ಭರವಸೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ ನಿಮ್ಮ ಪ್ರಶ್ನೆ ಬಂದಾಗ ಕೇಳಿ ಈಗ ತಾವು ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ರತ್ನಾಕರ್‌ರವರೇ ದಯವಿಟ್ಟು ಕುಳಿತುಕೊಳ್ಳಿ ನಿನ್ನೆ ತವಂಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೆ ಮತ್ತೆ ನಾಳೆ ಕೊಡುತ್ತೇನೆ, ಈಗ ದಯವಿಟ್ಟು ಕೂಡ್ರಿ ರಾವಂಯ್ಯನವರೇ ನಿಮ್ಮ ಪ್ರಶ್ನೆ ಮುಂದಕ್ಕೆ ಹಾಕಿದ್ದೇನೆ, ಈ ವಾರದಲ್ಲೇ ಉತ್ತರ ತರಿಸಿಕೊಡುತ್ತೇನೆ.

SRI G. BASAVANNAPPA.—It is to encourage inter-caste marriages, this incentive is given. ಅಂತರ್ ಜಾತೀಯ ವಿವಾಹ ಏನಿದೆ ಇದನ್ನು ಎನ್‌ಕರೇಜ್ ಮಾಡುವುದಕ್ಕೋಸ್ಕರ ನಾವು ಈ ರೀತಿ ಮಾಡಿದ್ದೇವೆ. ಇದನ್ನು ಹೆಚ್ಚು ಕಡಿಮೆ ಮಾಡತಕ್ಕ ಪ್ರಯತ್ನಕ್ಕೆ ಸರಕಾರ ಹೋಗುವುದಿಲ್ಲ.

ಶ್ರೀ ಪಟವಂಕ್ಕಿ ರತ್ನಾಕರ್.—ಕ್ಯಾಷ್ ಒಂದೇ ಸಲ ಕೊಟ್ಟರೆ ಅನುಕೂಲವಾಗುತ್ತದೆ, ಅದರಲ್ಲಿ ಮೂರು ಸಾವಿರ ಉಳಿಸಿಕೊಂಡು, ಎರಡು ಸಾವಿರ ಕೊಟ್ಟರೆ ಹೇಗೆ ?

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಇಂಟರ್-ಕ್ಯಾಸ್ಟ್ ಮ್ಯಾರೇಜ್ ಬಗ್ಗೆ ಬಹಳ ಕನ್‌ಫ್ಯೂಷನ್ ಇದೆ, ಈ ಡೆಫಿನಿಷನ್ ಬಗ್ಗೆ ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ. ದಯವಿಟ್ಟು ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಬಹಳ ಕನ್‌ಫ್ಯೂಷನ್ ಇದೆ. ನನ್ನ ಸ್ನೇಹಿತರೂ ಕೂಡಾ ಅಂತರ್ ಜಾತೀಯ ವಿವಾಹ ಆಗಿದ್ದಾರೆ ಇಂತಹ ಬಹಳ ಜನ ಇದ್ದಾರೆ. ತಾನೂ ಇದೇರೀತಿ ಆಗಿರುವವನೇ ನನ್ನದು ಬಿಡಿ, ನಾನು ಕ್ಲೈಮ್ ಮಾಡುವುದಿಲ್ಲ. ಅಂತರ್ ಜಾತೀಯ ವಿವಾಹವಾದ ದಂಪತಿಗಳ ಪೈಕಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದು, ಮತ್ತೊಬ್ಬರು ಹಿಂದೂ ಧರ್ಮದ ಯಾವುದಾದರೂ ಒಂದು ಜಾತಿಗೆ ಸೇರಿದ್ದರೆ, ಮಾತ್ರ ಪರಿಹಾರ ಕೊಡುತ್ತೀರಾ ? ಅಂತರ್ ಜಾತೀಯ ವಿವಾಹ ಆದ ದಂಪತಿಗಳ ಪೈಕಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದು, ಇನ್ನೊಬ್ಬರು ಹಿಂದೂ ಅಲ್ಲದ ಜಾತಿಗೆ ಅಂದರೆ ಕ್ರೈಸ್ತ, ಅಥವಾ ಇಸ್ಲಾಂ ಧರ್ಮದವರಾಗಿದ್ದರೆ ಕೂಡಾ ಪರಿಹಾರ ಕೊಡುತ್ತೀರಾ ? ನನ್ನ ಸ್ನೇಹಿತರು ಪರಿಶಿಷ್ಟ ಜಾತಿಗೆ ಸೇರಿದವರು, ಅವರು ಮುಸ್ಲಿಂ ಹುಡುಗಿಯನ್ನು ಮದುವೆಯಾಗಿದ್ದಾರೆ. ಅವರು ಕೂಡಿ ಎಂದು ಕೇಳುತ್ತಿದ್ದಾರೆ, ಇನ್ನೂ ಕೊಟ್ಟಿಲ್ಲ, ಡೈರೆಕ್ಟರ್‌ವರೆಗೆ ಫೈಲ್ ಕರೆಸ್ಪಾಂಡೆನ್ಸ್ ಮಾಡಿದ್ದಾರೆ. ನಾನು ಅವರ ಮನೆಗೆ ಮಾನ್ಯ ಜಾಲಪ್ಪನವರನ್ನೂ ಕರೆದು ಕೊಂಡು ಹೋಗಿದೆ ಚಹಾ ಕೊಟ್ಟಿದ್ದರು. ಅವರೂ ಚಹಾ ಕುಡಿದು ಬಂದಿದ್ದಾರೆ, ಅವರೂ ನೋಡಿದ್ದಾರೆ. ಇದುವರೆಗೆ ಅವರಿಗೆ ಪ್ರೋತ್ಸಾಹ ಧನ ಸಿಕ್ಕಿಲ್ಲ, ಇದಕ್ಕೆ ನಿಯಮಗಳು ಏನಿವೆ ? ನಿಮ್ಮ ದೃಷ್ಟಿಯಲ್ಲಿ ಅಂತರ್ ಜಾತೀಯ ವಿವಾಹ ಅಂದರೆ ಏನು ?

ಶ್ರೀ ಜಿ. ಬಸವಣ್ಣಪ್ಪ.—ಅಂತರ್ ಜಾತೀಯ ವಿವಾಹ ಎಂದರೆ, ವಧೂವರರಲ್ಲಿ ಯಾರಾದರೂ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.

ಶ್ರೀ ಮದನಗೋಪಾಲ ನಾಯಕ್.—ಪರಿಶಿಷ್ಟ ಜಾತಿಗೆ ಒಬ್ಬರು ಸೇರಿರಬೇಕು ಸರಿ, ಮತ್ತೊಬ್ಬರು ಹಿಂದೂ ಆಗಿರಬೇಕೋ ಅಥವಾ ಬೇರೆ ಜಾತಿಗೆ ಸೇರಿರಬಹುದೋ ?

ಶ್ರೀ ಯು. ಭೂಪತಿ.—ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದು ಇನ್ನೊಬ್ಬರು ಕ್ರೈಸ್ತ, ಅಥವಾ ಇಸ್ಲಾಂ ಧರ್ಮಕ್ಕೆ ಸೇರಿದಾಗ ಏನು ಮಾಡಬೇಕು ಎಂಬುದರ ಬಗ್ಗೆ ನಿಮ್ಮ ಅಧಿಕಾರಿಗಳ ಮನಸ್ಸಿನಲ್ಲಿ ಕನ್‌ಫ್ಯೂಷನ್ ಇದೆ ಈ ಬಗ್ಗೆ ಕರೆಸ್ಪಾಂಡೆನ್ಸ್ ಮಾಡುತ್ತಿದ್ದಾರೆ. ಅಂತಹವರಿಗೆ ಪ್ರೋತ್ಸಾಹ ಧನ ಕೊಡುತ್ತಿಲ್ಲ. ಈ ರೀತಿಯೇನಾದರೂ ನಿಮ್ಮ ಡೆಫಿನಿಷನ್ ಇದೆಯೇ ? ಒಬ್ಬರು ಪರಿಶಿಷ್ಟ ಜಾತಿಗೆ

ಸೇರಿದ್ದಾ, ಇನ್ನೂ ಬ್ಬರು ಹಿಂದೂಗಳಲ್ಲೇ ಯಾವುದಾದರೂ ಒಂದು ಜಾತಿಗೆ ಸೇರಿರಬೇಕೆಂದು ಇದೆಯೋ ಅಥವಾ ಬೇರೆ ಯಾವುದಾದರೂ ಮತಕ್ಕೆ ಸೇರಿರಬೇಕೆಂದು ಇದೆಯೋ ?

ಶ್ರೀ ಜಿ. ಬಸವಣ್ಣಪ್ಪ.—ಅದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಭೂಪತಿಯವರು ಕೇಳಿದ್ದರಲ್ಲಿ ಅರ್ಥ ಇದೆ. ಇದನ್ನು ಬಹಳ ಸುಲಭವಾಗಿ ಸಚಿವರು ಪರಿಹಾರ ಮಾಡಬಹುದು. ಬಹಳಷ್ಟು ಕಡೆ ಈ ರೀತಿ ಆಗಿದೆ. ಇನ್ನೂ ಕರೆಸ್ಪಾಂಡೆನ್ಸ್ ಆಗುತ್ತಾ ಇದೆ ಎಂದು ಹೇಳುತ್ತಿದ್ದಾರೆ ತಾವು ವಿವರಗಳನ್ನು ತರಿಸಿಕೊಂಡು ನಾಳೆ ನಾವಿದ್ದರಲ್ಲಿ ಉತ್ತರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಎಕ್ಸಾಮಿನ್ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಹೌದು, ಮಾಡುತ್ತೇನೆ.

ಅರಸೀಕೆರೆ ತಾಲ್ಲೂಕಿನಲ್ಲಿರುವ ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಉತ್ಪನ್ನ ಹಾಗೂ ಮಾರಾಟ ಸಂಘ

ಶ್ರೀ (ಉ) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಸೀಕೆರೆ ತಾಲ್ಲೂಕು ಕೆಂಕೆರೆ ಗ್ರಾಮದಲ್ಲಿ ದಿ ಉಲನ್ ಹ್ಯಾಂಡ್‌ಲೂಮ್ ಕೋ ಆಪ ರೇಟಿವ್ ಅಂಡ್ ಸೇಲ್ಸ್ ಸೊಸೈಟಿ ಎಂಬ ಸಂಘ ಇದೆಯೇ ?

ಆ) ಈ ಸಂಘವನ್ನು ಸರ್ಕಾರವು ರದ್ದುಗೊಳಿಸಿರುವುದು ನಿಜವೇ ?

ಇ) ಚುನಾಯಿತ ಅಧ್ಯಕ್ಷರು ಮತ್ತು ಚುನಾಯಿತ ಆಡಳಿತ ಸಮಿತಿಯು ಸಂಘವನ್ನು ಯಾವುದೇ ಅವ್ಯವಹಾರಗಳಿಲ್ಲದೆ ಲಾಭದಾಯಕವಾಗಿ ನಡೆಸುತ್ತಿದ್ದರೂ ಈ ಸಂಘವನ್ನು ಸರಕಾರವು ರದ್ದುಗೊಳಿಸಿ ಆಡಳಿತಾಧಿಕಾರಿಗಳನ್ನು ನೇಮಿಸಲು ಕಾರಣವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಇದೆ

ಆ) ಹಾಸನ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರು ಈ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿರುವುದು ನಿಜ.

ಇ) ಆಡಳಿತ ಮಂಡಳಿಯ ಮೇಲೆ ಆರೋಪಗಳು ರುಜುವಾತಾದುದರಿಂದಲೇ ಸಹಕಾರ ಸಂಘಗಳ ಉಪನಿಬಂಧಕರು ಕ್ರಮತೆಗೆದುಕೊಂಡಿರುತ್ತಾರೆ ಸಂಘವು ಕಳೆದ ಎರಡು ವರ್ಷಗಳಿಂದ ಸ್ಥಗಿತ ಗೊಂಡಿದ್ದು ನಷ್ಟವನ್ನೂ ಸಹ ಅನುಭವಿಸಿರುತ್ತದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ. ದಿ ಉಲ್ಲನ್ ಹ್ಯಾಂಡ್‌ಲೂಮ್ ವೀವರ್ಸ್ ಕೋ-ಆಪ ರೇಟಿವ್ ಪ್ರೊಡಕ್ಷನ್ ಅಂಡ್ ಸೇಲ್ಸ್ ಸೊಸೈಟಿ ಏನು ಇದೆ, ಈ ಸಂಘ ವೀವರ್ಸ್ ಹಿತದೃಷ್ಟಿಯಿಂದ ಇರತಕ್ಕಂಥ ಸಂಘ, ಈ ಸಂಘದ ಮೇಲೆ ಆರೋಪ ರುಜುವಾತಾಗಿದೆಯೇ? ಅಲ್ಲಿನ ಆಡಳಿತ ಮಂಡಲಿಯನ್ನು ರದ್ದು ಮಾಡುವುದಕ್ಕೆ ಕಾರಣಗಳೇನು ? ಮತ್ತು ಆ ಸಂಘದ ಮೇಲೆ ಇರುವ ಆರೋಪಗಳ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ? ಏನೇನು ಆರೋಪಗಳು ರುಜುವಾತಾಗಿವೆ ? ಆ ಆರೋಪಗಳ ಸ್ವರೂಪಗಳಾವುವು ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಂಘ ಕಳೆದ ಎರಡು ವರ್ಷಗಳಿಂದ ಕೆಲಸ ಮಾಡದ ಕಾರಣ ಸುಮಾರು ೩೩,೫೦೦ ರೂಪಾಯಿಗಳ ನಷ್ಟವಾಗಿದೆ. ೧೯೮೨-೮೩ನೇ ಸಾಲಿನ ಆಡಿಟ್ ರಿಪೋರ್ಟ್ ಪ್ರಕಾರ ಆ ಸಂಘದ ಅಧ್ಯಕ್ಷರಿಂದ ೪೭,೫೨೩ ರೂಪಾಯಿಗಳು ಬರಬೇಕು. ಆದ್ದರಿಂದ ಅವರ ಮೇಲೆ ಈಗಾಗಲೇ ಸಿವಿಲ್ ಕೇಸ್ ಹಾಕಿದ್ದೇವೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಆದೇಶ ಕೊಟ್ಟಿದ್ದೇನೆ ಅವರಿಗೆ ಸುಮಾರು ೧೨ ಸಾವಿರ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಟ್ಟಿದ್ದೇವೆ, ಸರ್ವೆ